

# ‘ಚೌಕಟ್ಟಿನೊಳಗಿನ ಹೊಸ ಪ್ರಯತ್ನ’

‘ಗೋಧಿ ಬಣ್ಣ ಸಾಧಾರಣ ಮೈಕಟ್ಟು’ ಚಿತ್ರದ ಮೂಲಕ ಗಮನ ಸೆಳೆದಿದ್ದ ನಿರ್ದೇಶಕ ಹೇಮಂತ್ ರಾವ್. ಅವರ ನಿರ್ದೇಶನದ ಎರಡನೇ ಸಿನಿಮಾ ‘ಕವಲು ದಾರಿ’ಗೆ ಪುನೀತ್ ರಾಜ್‌ಕುಮಾರ್ ಬಂಡವಾಳ ಹೂಡಿರುವುದು ವಿಶೇಷ.

★ ಪದ್ಮನಾಭ ಭಟ್



**ನಿಮ್ಮ ಎರಡನೇ ಸಿನಿಮಾಕ್ಕೆ ಸಸ್ಪೆನ್ಸ್ ಥ್ರಿಲ್ಲರ್ ವಸ್ತು ಆಯ್ದುಕೊಳ್ಳಲು ಏನು ಕಾರಣ?**

ನನಗೆ ಮೊದಲಿನಿಂದಲೂ ಥ್ರಿಲ್ಲರ್ ಸಿನಿಮಾಗಳ ಮೇಲೆ ವಿಶೇಷ ಪ್ರೀತಿ. ಇಂಥ ಸಿನಿಮಾಗಳನ್ನು ನೋಡಿ ಇಷ್ಟಪಟ್ಟೇ ಸಿನಿಮಾ ಮೇಕಿಂಗ್ ಕಲಿತಿರುವುದು ನಾನು. ಹಾಗೆಂದು ‘ಕವಲು ದಾರಿ’ಯಲ್ಲಿ ಬರೀ ಸಸ್ಪೆನ್ಸ್ ಥ್ರಿಲ್ಲರ್ ಮಾತ್ರವೇ ಇದೆ ಎಂದಲ್ಲ. ಭಾವನಾತ್ಮಕ ಸನ್ನಿವೇಶಗಳೂ ಇವೆ. ಒಂದು ಕಥೆಯಲ್ಲಿ ಏನೇನು ಇರಬೇಕು ಎಂದು ನಾನು ನಂಬಿದ್ದೇನೆಯೋ ಅವೆಲ್ಲವೂ ‘ಕವಲು ದಾರಿ’ ಸಿನಿಮಾದಲ್ಲಿ ಇದೆ.

ಒಬ್ಬ ಫಿಲ್ಮ್ ಮೇಕರ್ ಕಂಫರ್ಟ್ ಝೋನ್‌ನಲ್ಲಿ ನಿಂತು ಬಿಡಬಾರದು ಎಂಬುದು ನನ್ನ ನಂಬಿಕೆ. ಒಬ್ಬ ನಿರ್ದೇಶಕ ಒಂದು ಸಿನಿಮಾ ಹಿಟ್ ಕೊಟ್ಟ ಮೇಲೆ ಕಂಫರ್ಟಬಲ್ ಆಗುವುದು ಸುಲಭ. ಆದರೆ ಆಗ ನನ್ನೊಳಗಿನ ಕಲಾವಿದನನ್ನು, ನಿರ್ದೇಶಕನನ್ನು ಶೋಧಿಸಿಕೊಳ್ಳಲು ಸಾಧ್ಯವಿಲ್ಲ. ಬೇರೆ ಬೇರೆ ಪ್ರಕಾರದ ಸಿನಿಮಾಗಳನ್ನು ಮಾಡುವುದು ಅಂಥ ಶೋಧನೆಯ ದಾರಿ.

**ಪುನೀತ್ ರಾಜ್‌ಕುಮಾರ್ ಅವರ ‘ಪಿಆರ್‌ಕೆ ಪ್ರೊಡಕ್ಷನ್’ನಲ್ಲಿ ಈ ಚಿತ್ರ ತಯಾರಾಗುತ್ತಿದೆ. ಇದರಿಂದ ನಿಮಗೆ ಆದ ಅನುಕೂಲಗಳೇನು?**

ನಾವು ತುಂಬ ಸರಿಯಾಗಿ ಪ್ಲ್ಯಾನಿಂಗ್ ಮಾಡಿಕೊಂಡರೆ ಅದ್ದೂರಿತನ ಎನ್ನುವುದು ತೆರೆಯ ಮೇಲೆ ಕಾಣಿಸುತ್ತದೆ. ಇಂಥ ಹೊಸ ಪ್ರಯತ್ನಗಳಿಗೆ ಅದರದ್ದೇ ಆದ ಚೌಕಟ್ಟಿರುತ್ತದೆ. ಅದರೊಳಗೆ ಮಾಡಿದರೆ ಮಾತ್ರ ಯಶಸ್ವಿಯಾಗಲು ಸಾಧ್ಯ. ಈ ಸಿನಿಮಾವನ್ನು ನಾನು ಏಳೆಂಟು ಕೋಟಿ ಹಣ ಖರ್ಚು ಮಾಡಿ ಮಾಡಿದರೆ ಸಿನಿಮಾ ಇನ್ನೂ ಅದ್ಭುತವಾಗಿ ಬರಬಹುದು. ಆದರೆ ಅದಕ್ಕೆ ತಕ್ಕ ಹಾಗೆ ಬಿಜಿನೆಸ್ ಆಗದೇ ಇರಬಹುದು. ಈ ಬ್ಯಾಲೆನ್ಸ್ ತುಂಬ ಮಹತ್ವದ್ದು.

ಪುನೀತ್ ಅವರಿಗೆ ಇಂಥದ್ದೇ ಸಿನಿಮಾ ಮಾಡಬೇಕು, ಇಷ್ಟೇ ಬಜೆಟ್‌ನಲ್ಲಿ ಸಿನಿಮಾ ಮಾಡಬೇಕು ಎನ್ನುವುದಕ್ಕಿಂತ ಒಳ್ಳೆಯ ಸಿನಿಮಾ ಮಾಡಬೇಕು ಎಂಬ ಆಸೆ ಇದೆ. ಅವರು ಪ್ರಪಂಚದ ಎಲ್ಲ ಥರದ ಸಿನಿಮಾಗಳನ್ನೂ ನೋಡುತ್ತಾರೆ. ಸಿನಿಮಾ ಬಗ್ಗೆ ತುಂಬ ಅಭಿಮಾನ ಇದೆ ಅವರಿಗೆ. ನಿರ್ಮಾಣದ ಹಂತದಲ್ಲಿ ಪುನೀತ್ ಮತ್ತು ಅಶ್ವಿನಿ ತುಂಬ ಬೆಂಬಲ ನೀಡಿದ್ದಾರೆ. ನನ್ನ ಮೇಲೆ ನಂಬಿಕೆ ಇಟ್ಟು ಹಣ ಹೂಡಿದ್ದಾರೆ. ಈ ಸಿನಿಮಾ ಗೆದ್ದರೆ ಇಂಥ ಹತ್ತು ಹೊಸ ಥರದ ಸಿನಿಮಾಗಳನ್ನು ನಿರ್ಮಾಣ ಮಾಡುತ್ತಾರೆ. ಹಾಗಾಗಿ ಈ ಸಿನಿಮಾ ಗೆಲ್ಲಿಸುವ ಜವಾಬ್ದಾರಿ ನನ್ನ ಮೇಲೆ ಇದೆ.

**ಟ್ರೇಲರ್‌ಗೆ ಸ್ಪಂದನ ಹೇಗಿದೆ?**

ತುಂಬ ಚೆನ್ನಾಗಿದೆ. ನಮ್ಮ ಇಂಡಸ್ಟ್ರಿ ಅಲ್ಲದೆ ಬೇರೆ ಇಂಡಸ್ಟ್ರಿಯಿಂದಲೂ ರೆಸ್ಪಾನ್ಸ್ ಸಿಕ್ಕಿದೆ. ಹಾಗಾಗಿಯೇ ನರ್ವಸ್ ಆಗುತ್ತಿದ್ದೇನೆ. ಟೀಸರ್ ಮೆಚ್ಚಿಕೊಂಡಿರುವುದರಿಂದ ಸಿನಿಮಾ ಮೇಲೆಯೂ ನಿರೀಕ್ಷೆ ಜಾಸ್ತಿ ಇರುತ್ತದೆ. ಆದರೆ ಸಿನಿಮಾ ಏನಿದೆಯೋ ಅದನ್ನೇ ಇಟ್ಟುಕೊಂಡು ಟ್ರೇಲರ್ ಮಾಡಿದ್ದೇವೆ. ಹಾಗಾಗಿ ಸಿನಿಮಾ ಕೂಡ ಮೆಚ್ಚಿಕೊಳ್ಳುತ್ತಾರೆ ಎಂಬ ನಂಬಿಕೆ ಇದೆ.

**ಸಿನಿಮಾ ಬಿಡುಗಡೆ ಯಾವಾಗ?**

ಯಾವಾಗ ಬಿಡುಗಡೆ ಅಂತ ಇನ್ನೂ ಯೋಚಿಸಿಲ್ಲ. ಸದ್ಯಕ್ಕೆ ಪುನೀತ್ ‘ನಟಸಾರ್ವಭೌಮ’ ಚಿತ್ರದ ಚಿತ್ರೀಕರಣದಲ್ಲಿದ್ದಾರೆ. ಅದು ಮುಗಿದ ಮೇಲೆ ಚರ್ಚಿಸಿ ನಿರ್ಧರಿಸುತ್ತೇವೆ. ಈ ವರ್ಷವೇ ಬಿಡುಗಡೆಯಾಗುತ್ತದೆ. ■